ಅ) ಈ ಘಟನೆಯಿಂದಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಆದ ಹಣಕಾಸಿನ ನಷ್ಟ ವೆಷ್ಟು ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ತಂಮಂಕೂರಿನ ಸಿದ್ದಗಂಗಾ ಮಂಠಕ್ಕೆ ಸಂಬಂಧಿಸಿದಂತೆ ದಿನಾಂಕ ೧–೪–೮೮ರಿಂದ ೫–೪–೮೮ರ ವರೆಗೆ ನಡೆದ ಗಲಭೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ೬ ಬಸ್ಸುಗಳನ್ನು ಸುಡಲಾಗಿದೆ. ಹಾಗೂ ಮತ್ತೊಂದು ಬಸ್ಸಿಗೆ ಮುಂಭಾಗದ ಗಾಜುಗಳು (ವಿಂಡ್ ಸ್ಕ್ರೀನ್) ಒಡೆದಿವೆ.

ಆ) ರೂ. ೧೭.೫ ಲಕ್ಷ ಹಾನಿಯಾಗಿದೆ. ದಿನಾಂಕ ೩–೪–೮೮ ರಿಂದ ೧೫–೪–೮೮ರ ವರೆಗೆ ಸಂಸ್ಥೆಯ ತುಮಕೂರು ಘಟಕದ ೬೩ ಷೆಡ್ಯೂಲ್‌ಗಳನ್ನು ರದ್ದುಪಡಿಸಲಾಯಿತು. ತತ್ಸಂಬಂಧವಾಗಿ ಸಂಸ್ಥೆಗೆ ಪ್ರತಿದಿನ ರೂ. ೧.೨ ಲಕ್ಷ ವರಮಾನ ಕಡಿಮೆಯಾಯಿತು.

ಶ್ರೀ ಗೋಪಾಲ ಮುಕಂದ ಕಾನಡೆ.—ಅಧ್ಯಕ್ಷರೇ ನನ್ನ ಪ್ರಶ್ನೆ ಉತ್ತರವಾಗಿ ೬ ಬಸ್ಸುಗಳನ್ನು ಸುಡಲಾಗಿದೆ ಎಂದು ಹೇಳಿದ್ದಾರೆ. ಈ ೬ ಬಸ್ಸುಗಳಲ್ಲಿ ಒಂದೊಂದು ಬಸ್ಸಿನ ಬೆಲೆ ಎಷ್ಟು? ಬೆಂಗಳೂರಿನಿಂದ ಸಿರ್ಸಿಗೆ ಹೋಗುವ ಸೂಪರ್ ಡೀಲಕ್ಸ್ ಬಸ್ಸನ್ನು ಏನು ಸುಟ್ಟರು, ಆ ಬಸ್ಸಿನ ಬೆಲೆ ಎಷ್ಟು?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಅಧ್ಯಕ್ಷರೇ, ಈ ಬಸ್‌ನ ನಿರ್ದಿಷ್ಟ ಬೆಲೆಯ ಮಾಹಿತಿ ನನ್ನ ಹತ್ತಿರ ಇಲ್ಲ. ಆ ಬಸ್ ಎಷ್ಟು ಕಿಲೋಮೀಟರ್ ಓಡಿತ್ತು, ಅದರ ಡಿಪ್ರಿಸಿಯೇಷನ್ ಏನು, ಎಲ್ಲಾ ಆದ ಮೇಲೆ ಅದು ಎಷ್ಟು ಬೆಲೆ ಬಾಳುತ್ತದೆ ಎಂಬ ಮಾಹಿತಿ ನನ್ನಲ್ಲಿ ಈಗ ಇಲ್ಲ. ಅದನ್ನು ಬೇಕಾದರೆ ಪ್ರತ್ಯೇಕವಾಗಿ ಮಾನ್ಯ ಸದಸ್ಯರಿಗೆ ನಂತರ ಕಳುಹಿಸಿಕೊಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಇದರಿಂದ ೧೭.೫ ಲಕ್ಷ ರೂಪಾಯಿಗಳ ಹಾನಿಯಾಗಿದೆ ಎಂದು ಉತ್ತರ ಕೊಟ್ಟಿದಾ ರೆ. ಇದರಲ್ಲಿ ೧.೨ ಲಕ್ಷ ರೂಪಾಯಿಗಳ ವರಮಾನ ಕಡಿಮೆಯಾಗಿರುವುದೂ ಸೇರಿದೆಯೇ? ಅಷ್ಟನ್ನೂ ಸೇರಿಸಿದರೆ ೧೭ ಲಕ್ಷ ಚಿಲ್ಲರೆ ಆಗುತ್ತದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಈ ೧೭.೫ ಲಕ್ಷದಲ್ಲಿ ಎರಡೂ ಸೇರಿದೆ

ಶ್ರೀ ಗೋಪಾಲ ಮುಕುಂದ ಕಾನಡೆ.—ಉತ್ತರದಲ್ಲಿ ಕಳಗಡೆ ೧ ಲಕ್ಷ ವರಮಾನ ಕಡಿಮೆ ಆಗಿದೆ ಎಂದು ಕೊಟ್ಟಿದ್ದಾರೆ. ಮೇಲೆ ೧೭ ಲಕ್ಷ ರೂ. ಹಾನಿಯಾಗಿದೆ ಎಂದು ಕೊಟ್ಟಿದ್ದಾರೆ. ಆದರೆ ನನಗೆ ಬೇಕಾಗಿರುವುದು ಏನು ಎಂದರೆ, ಯಾವ ಯಾವ ಬಸ್‌ಗೆ ಏನೇನು ರೇಟ್ ಇದೆ? ಆದಕ್ಕೆ ಹೊಸ ಟೈರ್ ಇತ್ತೋ, ಹಳೇ ಟೈರ್ ಇತ್ತೋ, ಆದು ಹೊಸ ಬಸ್ಸೋ ಅಥವಾ ಹಳೆಯ ಬಸ್ಸೋ, ಇದರಲ್ಲಿ ಹೊಸ ಬಸ್‌ಗಳು ಎಷ್ಟಿವೆ. ಹಳೇ ಬಸ್ಸುಗಳು ಎಷ್ಟಿವೆ ಕೆಟ್ಟು ಗುಜರಿಗೆ ಹೋಗುವ ಬಸ್‌ಗಳು ಎಷ್ಟಿವೆ? ಈ ವಿವರಗಳು ಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಈ ಎಲ್ಲಾ ಮಾಹಿತಿಗಳನ್ನೂ ತರಿಸಿ ಮಾನ್ಯ ಸದಸ್ಯರಿಗೆ ಕಳುಹಿಸಿ ಕೊಡುತ್ತೇನೆ.

ಅಧ್ಯಕ್ಷರು.—ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೭೫೬ (೧೫೫೭)ಕ್ಕೆ ೧೫–೬–೧೯೮೮ ರಂದು ಮಾನ್ಯ ಸಹಕಾರ ಮಂತ್ರಿಯವರು ಕೊಡುತ್ತಾರೆ. ಈ ಪ್ರಶ್ನೆಯನ್ನು ತೆಪೆಹಿಡಿಯಲಾಗಿದೆ.

ಸುಳ್ಯ ಕ್ಷೇತ್ರವಲ್ಲಿ ಸಾರಿಗೆ ಸೌಲಭ್ಯ

೭೦೧೭. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಎರಡು ವರ್ಷಗಳಿಂದ ಕ.ರಾ.ರ.ಸಾ. ಸಂಸ್ಥೆಯಿಂದ ಈ ಕೆಳಗೆ ವಿವರಿಸಿದ ಸ್ಥಳಗಳಿಗೆ ಬಸ್ಸುಗಳನ್ನು ಕೇಳಿಕೊಳ್ಳಲಾಗಿದ್ದುದು ನಿಜವೇ?

(೧) ಸುಳ್ಯದಿಂದ ದೊಡ್ಡ ತೋಟ ಮಾರ್ಗವಾಗಿ ಜಯನಗರಕ್ಕೆ ;

(೨) ಸುಳ್ಯದಿಂದ ಮಡಪ್ಪಾಡಿ ಮಾರ್ಗವಾಗಿ ಜಯನಗರಕ್ಕೆ ;

(ಜ) ಸುಳ್ಯದ ಆಲಿಟ್ಟ ಬಡ್ಡಕ್ಕ ಸರ್ವಿಸ್ಸನ್ನು ೨ ಕಿ.ಮೀ. ದೂರದ ಹೊನ್ನೇಡಿ ಕೂರ್ನಡ್ಕಕ್ಕೆ ;

(ಳ) ಅಣ್ಣವರ ಮಂಡೆಕೋಲು ಬಸ್ಸನ್ನು ೩ ಕಿ.ಮೀ. ದೂರದ ಮಂಡೆಕೋಲು ಗಡಿ ತನಕ;

(ಞ) ಪುತ್ತೂರು ತಾಲ್ಲೂಕಿನ ಪಾಲ್ತಾಡು ಹರಿಜನ ಕಾಲೋನಿ ಸವಣೂರು ಎಂಬಲ್ಲಿಗೆ ;

(ಟ) ನಿಂತಿ ಕಲ್ಲಿನಿಂದ ಕಣಿಯೂರು ಜೂನಿಯರ್ ಕಾಲೇಜು ವಿದ್ಯಾರ್ಥಿಗಳಿಗಾಗಿ ;

ಆ) ಹಾಗಿದ್ದಲ್ಲಿ ಸದರಿ ಸ್ಥಳಗಳಿಗೆ ಬಸ್ಸನ್ನು ನೀಡಲು ಸರ್ಕಾರದವರು ಕೈಕೊಂಡ ಕ್ರಮ ಗಳೇನು ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ಹೌದು.

ಆ ಪ್ರಶ್ನೆ ಆ (೧) ರಿಂದ (ಟ) ವರೆಗಿನ ಸೂಚಿತ ಮಾರ್ಗಗಳು ವಾಹನ ಸಂಚಾರಕ್ಕೆ ಯೋಗ್ಯ ರಸ್ತೆ ನದಿಗೆ ಸೇತುವೆಗಳ ನಿರ್ಮಾಣವಾಗಿರುವುದಿಲ್ಲ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ನಿಂತಿಕಲ್ಲಿನಿಂದ ಕಣಿಯೂರು ಕಿರಿಯ ಕಾಲೇಜು ವಿದ್ಯಾರ್ಥಿಗಳ ಸಲುವಾಗಿ ಅಗತ್ಯ ಸಾರಿಗೆ ಸೌಲಭ್ಯವನ್ನು ಒದಗಿಸಿದೆ.

ಶ್ರೀ ಬಿ. ಎಂ. ಇದ್ದಿನಬ್ಬ (ಶ್ರೀ ಕೆ. ಕುಶಾಲರವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ೧ ರಿಂದ ೫ರವರೆಗೆ ವಾಹನ ಸಂಚಾರಕ್ಕೆ ಯೋಗ್ಯ ರಸ್ತೆ ಆಗಿದ್ದರೂ ನದಿಗೆ ಸೇತುವೆ ನಿರ್ಮಾಣವಾಗಿರುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಇದೆಲ್ಲಾ ಮಂಲೆನಾಡು ಪ್ರದೇಶ ದಲ್ಲಿರುವುದರಿಂದ ಇಲ್ಲಿ ಸಾರಿಗೆ ಸಂಪರ್ಕ ಬಹಳ ಅಗತ್ಯವಾಗಿದೆ, ಇದನ್ನು ಆದಷ್ಟು ಬೇಗ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಪುತ್ತೂರು ತಾಲ್ಲೂಕಿನ ಪಾಲ್ತಾಡು–ಹರಿಜನ ಕಾಲೋನಿ ಸವಣೂರು ಎಂಬಲ್ಲಿಗೆ ವಾಹನ ಸಂಚಾರ ಬಹಳ ಅಗತ್ಯ ಇದೆ. ಇಲ್ಲಿಗೆ ಬಸ್‌ನ ಸಂಚಾರವನ್ನು ಆದಷ್ಟು ಬೇಗ ಕಲ್ಪಿಸಿ ಕೊಡುತ್ತೀರಾ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಎಲ್ಲೆಲ್ಲಿ ರಸ್ತೆಗಳು ಇದ್ದು ಸೇತುವೆಗಳ ನಿರ್ಮಾಣವಾಗಿದೆ ಅಂತಹ ಎಲ್ಲಾ ಕಡೆಗೆ ಅಗತ್ಯ ಇದ್ದರೆ ಬಸ್‌ಗಳ ಸಂಚಾರ ವ್ಯವಸ್ಥೆಯನ್ನು ಮಾಡತಕ್ಕ ಜವಾಬ್ದಾರಿಯನ್ನು ಸರಕಾರ ತೆಗೆದುಕೊಳ್ಳುತ್ತದೆ. ಆದಷ್ಟು ಬೇಗ ಈ ಮಾರ್ಗಗಳಲ್ಲಿ ರಸ್ತೆಗೆ ಸೇತುವೆಗಳನ್ನು ಮಾಡಿಸು ವಂತೆ ನಾನು ಸಂಬಂಧಪಟ್ಟ ಇಲಾಖೆಗೆ ಸೂಚನೆಯನ್ನೂ ಸಹ ಕೊಡುತ್ತೇನೆ.

ಪ್ರಶ್ನೆ ಸಂಖ್ಯೆ ೭೩೮ (೧೫೫೫)

ಶ್ರೀ ಬಿ. ಜಿ. ಜಮಖಂಡಿ:—ಮಾನ್ಯ ಸದಸ್ಯರು ಹಾಜರಿರಲಿಲ್ಲ

ಪ್ರಶ್ನೆ ಸಂಖ್ಯೆ ೭೫೯ (೧೫೫೭)

ಶ್ರೀ ಕಲ್ಯಾಣರಾವ್ ಪೊಳಕೇರಿ.—ಮಾನ್ಯ ಸದಸ್ಯರು ಹಾಜರಿರಲಿಲ್ಲ.

ಪ್ರಶ್ನೆ ಸಂಖ್ಯೆ ೭೪೦ (೧೫೪೯).—ಶ್ರೀ ಎ.ಕೃಷ್ಣಪ್ಪ

ಅಧ್ಯಕ್ಷರು.—ಈ ಪ್ರಶ್ನೆಯನ್ನು ೧೦.೬.೮೮ಕ್ಕೆ ಮುಂದಕ್ಕೆ ಹಾಕಲಾಗಿದೆ. ಪ್ರಶ್ನೆ ೭೪೧(೧೪೦೩)ಕ್ಕೆ ಮಾನ್ಯ ಮಂತ್ರಿಗಳು ಕಾಲಾವಕಾಶ ಕೇಳಿದ್ದಾರೆ. ನಿಮ್ಮ ಪ್ರಶ್ನೆ ೧೪.೬.೮೮ಕ್ಕೆ ಬರುತ್ತದೆ. ಪ್ರಶ್ನೆ ಸಂಖ್ಯೆ ೭೪೨ (೧೭೪೮) ಶ್ರೀ ಆರ್. ರಾಮಯ್ಯ–ಮಾನ್ಯ ಸದಸ್ಯರು ಹಾಜರಿಲ್ಲ.